1068/2022-23

Office of the Additional Commissioner of Commercial Taxes
14 FEB 2023
2246
ADCOM
Bengaluru (e-Governance)

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

ಸಂ:ವಾ.ತೆ.ಜಂ.ಆ(ಆ)ವಿ.ಸ.ಸೇ.ತೆ.ಕ-೪/ವಾಹನ/ಸಿಆರ್-9/2022-23 ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,(ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-4,
ರಾಜೇಂದ್ರನಗರ, ಕೋರಮಂಗಲ, ಬೆಂಗಳೂರು-560047,
ದೂ:080-25704833, ದಿನಾಂಕ:**31.01.2023**

## ಪ್ರಕಟಣೆ

**ವಿಷಯ**: ದಿನಾಂಕ: 01.04.2023ರಿಂದ ದಿನಾಂಕ: 31.03.2024ರ ಅವಧಿಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಕೋರಮಂಗಲ, ಬೆಂಗಳೂರು, ಈ ಕಛೇರಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಖಾಸಗಿ ಬಾಡಿಗೆಗೆ ವಾಹನಗಳನ್ನು ಪಡೆದುಕೊಳ್ಳುವ ಬಗ್ಗೆ.

**ಉಲ್ಲೇಖ**: 1) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರವರ ಸುತ್ತೋಲೆ ಸಂ.ವಿಹೆಚ್‌ಟಿ/ಸಿ.ಆರ್-15/2022-23, ದಿನಾಂಕ:01.08.2022.

2) ವಾಣಿಜ್ಯ ತೆರಿಗೆಗಳ ಆಯುಕ್ತರವರ ಪತ್ರದ ಸಂಖ್ಯೆ: ವಿಹೆಚ್‌ಟಿ/ಸಿಆರ್-22/2019-20 ದಿನಾಂಕ:27.04.2022

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಕೋರಮಂಗಲ, ಬೆಂಗಳೂರು ಇವರ ಕಛೇರಿಯ ಉಪಯೋಗಕ್ಕಾಗಿ 13 (ಹದಿಮೂರು) ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖದಲ್ಲಿ ತಿಳಿಸಿರುವ ಮಾನ್ಯ ಆಯುಕ್ತರ ಪತ್ರದಲ್ಲಿ ಅನುಮತಿಸಿರುವುದರಿಂದ, ಮಾಲೀಕ ಚಾಲಕರಾಗಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶಿವಾನಿ 2012, ದಿನಾಂಕ: 23.08.2012 ರಲ್ಲಿ ತಿಳಿಸಿರುವ ನಿಯಮಗಳನ್ವಯ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಸರ್ಕಾರದ ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಆಇ 156 ವೆಚ್ಚ- 12/2019, ದಿನಾಂಕ: 22.03.2022 ಅನ್ವಯ ವಾಹನಗಳ ಬಾಡಿಗೆ ತಿಂಗಳಿಗೆ ಮೊತ್ತ ರೂ. 35,000-00 ನೀಡಲಾಗುವುದು.
2. ವಾಹನದ ಮಾದರಿಯು 2018 ರಲ್ಲಿ ತಯಾರಾದ ಮತ್ತು ನಂತರದಾಗಿರತಕ್ಕದ್ದು, ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನಾ ಕೌಶಲ್ಯವನ್ನು ಪರಶೀಲಿಸಿ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುವುದು.
3. ದಿನಾಂಕ: 01.10.2018 ರಿಂದ ಅನ್ವಯವಾಗುವಂತೆ ಈ ಹಿಂದೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಅರ್ಜಿಗಳನ್ನು ಪರಿಗಣಿಸಿರುವುದಿಲ್ಲ.
4. ಗುತ್ತಿಗೆಯ ಅವಧಿ ದಿನಾಂಕ: 01.04.2023 ರಿಂದ ದಿನಾಂಕ: 31.03.2024 ರವರೆಗೆ.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:-28.02.2023 ಸಂಜೆ 5.30 ಗಂಟೆಯವರೆಗೆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

ಅರ್ಹಗೊಂಡ ಮಾಲೀಕರೇ ಚಾಲಕರಾಗಿರುವ ವಾಹನ ಮಾಲೀಕ/ಚಾಲಕರ ವಿವರವನ್ನು ಇಲಾಖೆಯ ಸೂಚನ ಫಲಕ ಹಾಗೂ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

## ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು:

| | |
|---|---|
| 1 | ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು-2 |
| 2 | ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಆಧಾರ್ ಕಾರ್ಡ್/ ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸದ ದಾಖಲೆ ಬ್ಯಾಂಕ್ ಖಾತೆಯ ವಿವರಗಳು/ಚೆಕ್ಕಿನ ಪ್ರತಿ). |
| 3 | ವಾಹನದ ನೊಂದಣಿ ಪುಸ್ತಕದ ಪ್ರತಿ-ಪ್ರಮಾಣ ಪತ್ರ |
| 4 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನದ ವಿಮಾ ಪಾಲಿಸಿಯ ಪ್ರತಿ |
| 5 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನ ಪರವಾನಗಿ ಪ್ರತಿ |
| 6 | ರೋಡ್ ತೆರಿಗೆ ಪಾವತಿಸಿರುವ ವಿವರ |
| 7 | ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸೆನ್ಸ್ ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ |
| 8 | ಪಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ನಮೂದಿಸತಕ್ಕದ್ದು. |
| 9 | ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ ಖಾಸಗಿ ವಾಹನ ಚಾಲಕರ/ಮಾಲೀಕರ ಹೊರಗುತ್ತಿಗೆ ಸೇವೆ ಸಲ್ಲಿಸಲು ಅರ್ಜಿ ಎಂದು ನಮೂದಿಸುವುದು |
| 10 | ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. |
| 11 | ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,(ಆಡಳಿತ), ವಿ.ಸ&ಸೇ.ತೆ.ಕ-4, ವಿ.ಟಿ.ಕೆ-2, 4ನೇ ಮಹಡಿ, 'ಎ' ಬ್ಲಾಕ್, ಕೊಠಡಿ ಸಂಖ್ಯೆ 401, ಕೋರಮಂಗಲ, ಬೆಂಗಳೂರು, ಇವರ ಶಾಖೆಯಲ್ಲಿ ಸಲ್ಲಿಸುವುದು ಹಾಗೂ ಅರ್ಜಿಗಳ ಸ್ವೀಕೃತಿ ಅನುಸಾರವಾಗಿ ಕ್ರಮ ಸಂಖ್ಯೆ ನೀಡಲಾಗುವುದು. |
| 12 | ಅರ್ಜಿಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ಷರತ್ತುಗಳ ವಿವರಗಳ ಪಟ್ಟಿ ಅನ್ವಯ ಕಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕ/ಚಾಲಕರು ಕಡ್ಡಾಯವಾಗಿ ಪಾಲಿಸತಕ್ಕದ್ದು. |
| 13 | ಅರ್ಹಗೊಂಡ ಅರ್ಜಿದಾರರ ವಿವರಗಳ ಪಟ್ಟಿಯ ಪ್ರಕಟಣೆ ದಿನಾಂಕ: 06.03.2023 |

## ಷರತ್ತು ಮತ್ತು ನಿಬಂಧನೆಗಳು

| | |
|---|---|
| 1 | ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಒಂದು ತಿಂಗಳಲ್ಲಿ ಎರಡು ದಿನ ಮಾತ್ರ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ-ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆ ಕಡ್ಡಾಯವಾಗಿ ಮಾಡಲೇಬೇಕು. ಇಲ್ಲದಿದ್ದರೆ ಗೈರುಹಾಜರಿ ದಿವಸದ ಬಾಡಿಗೆ ಕಡಿತಗೊಳಿಸಲಾಗುವುದು. |
| 2 | ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಕರಾರಿನಂತೆ ದರಗಳಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತಿದೆ. |
| 3 | ಮಾಲೀಕ-ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು, ಕರ್ತವ್ಯದ ಸಮಯದಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸಬೇಕು. ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ |